ದಾವಣಗೆರೆ ವಿಶ್ವವಿದ್ಯಾನಿಲಯ
Davangere University

ಕುಲಸಚಿವರ ಕಛೇರಿ (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ–577007.
ದೂರವಾಣಿ ಸಂಖ್ಯೆ: 08192–208420/208104.

Office of the Registrar (Evaluation)
Davangere University,
Shivagangothri, Davangere -577007.
Phone No. 08192–208420/208104.

Email ID: examination@davangereuniversity.ac.in

ಸಂಖ್ಯೆ:ದಾವಿ:ಪವಿ:ಆಶಾ:2022–23;/6312 ದಿನಾಂಕ:30–03–2023

:ಪ್ರಕಟಣೆ:

ವಿಷಯ: ಪ್ರಥಮ ದರ್ಜೆ ಸಹಾಯಕರ ಸ್ಪರ್ಧಾತ್ಮಕ ಪರೀಕ್ಷೆಯನ್ನು ಮುಂದೂಡಿರುವ ಬಗ್ಗೆ.

ಉಲ್ಲೇಖ: 1 ಕಛೇರಿ ಪತ್ರ ಸಂಖ್ಯೆ:ದಾವಿ:ಪವಿ:ಆಶಾ:2022–23/6227, ದಿನಾಂಕ:21–03–2023

2 ಪರೀಕ್ಷಾ ಅಭ್ಯರ್ಥಿಗಳ ಮನವಿ ಪತ್ರಗಳ ದಿನಾಂಕ: 27–03–2023.

3 ಡೀನರ ಸಭೆ ಅನುಮೋದನೆ ದಿನಾಂಕ: 30–03–2023.

4 ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30–03–2023.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪ್ರಕಟಣೆಯಲ್ಲಿ ವಿಶ್ವವಿದ್ಯಾನಿಲಯದ ಪ್ರಥಮ ದರ್ಜೆ ಸಹಾಯಕರ ಸ್ಪರ್ಧಾತ್ಮಕ ಮರು ಪರೀಕ್ಷೆಯನ್ನು ದಿನಾಂಕ: 02–04–2023ರಂದು ನಡೆಸಲಾಗುವುದೆಂದು ಪ್ರಕಟಿಸಲಾಗಿತ್ತು ಅದರೆ ಉಲ್ಲೇಖ(2)ರ ಪತ್ರಗಳಲ್ಲಿ ಸದರಿ ದಿನಾಂಕದಂದು ಕೆ.ಪಿ.ಎಸ್.ಸಿ ಪರೀಕ್ಷಾ ಪ್ರಾಧಿಕಾರದಿಂದ ಪರೀಕ್ಷೆಗಳು ನಿಗದಿಪಡಿಸಿರುವುದರಿಂದ ವಿಶ್ವವಿದ್ಯಾನಿಲಯದ ಪ್ರಥಮ ದರ್ಜೆ ಸಹಾಯಕರ ಸ್ಪರ್ಧಾತ್ಮಕ ಪರೀಕ್ಷೆಯನ್ನು ಮುಂದೂಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಹಾಗೂ ಮಾನ್ಯ ಕುಲಪತಿಗಳ ನಿದೇಶನದಂತೆ ದಿನಾಂಕ: 02–04–2023ರಂದು ಜರುಗಬೇಕಿದ್ದ ಪ್ರಥಮ ದರ್ಜೆ ಸಹಾಯಕರ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ: 09–04–2023ಕ್ಕೆ ಮುಂದೂಡಲಾಗಿರುತ್ತದೆ. ಇನ್ನುಳಿದ ಸಹಾಯಕ ಕುಲಸಚಿವರು ಮತ್ತು ಕಛೇರಿ ಅಧೀಕ್ಷಕರುಗಳ ಪರೀಕ್ಷೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಪರಿಷ್ಕೃತ ಪರೀಕ್ಷಾ ವೇಳಾಪಟ್ಟಿಯು ಈ ಕೆಳಕಂಡಂತೆ ಇರುತ್ತದೆ.

ದಿನಾಂಕ	ಹುದ್ದೆಗಳು	ಸಮಯ	ಪತ್ರಿಕೆಗಳು
03.04.2023	ಕಛೇರಿ ಅಧೀಕ್ಷಕ	ಬೆಳಗ್ಗೆ 10.30 ರಿಂದ 12.00	ಪತ್ರಿಕೆ–1 – ಗರಿಷ್ಟ ಅಂಕಗಳು – 100, ಒ.ಎಂ.ಆರ್. ಆಧರಿತ
		ಮಧ್ಯಾಹ್ನ 12.30 ರಿಂದ 01.30	ಗಣಕ ವಿಜ್ಞಾನ ಪ್ರಾಯೋಗಿಕ ಪರೀಕ್ಷೆ– ಗರಿಷ್ಟ 50 ಅಂಕಗಳು.
03.04.2023	ಸಹಾಯಕ ಕುಲಸಚಿವರು	ಮಧ್ಯಾಹ್ನ 02.30 ರಿಂದ 4.00	ಪತ್ರಿಕೆ–1 – ಗರಿಷ್ಟ ಅಂಕಗಳು – 100, ಒ.ಎಂ.ಆರ್. ಆಧರಿತ
		ಅಪರಾಹ್ನ 04.30ರಿಂದ 05.30	ಗಣಕ ವಿಜ್ಞಾನ ಪ್ರಾಯೋಗಿಕ ಪರೀಕ್ಷೆ– ಗರಿಷ್ಟ 50 ಅಂಕಗಳು.
09.04.2023	ಪ್ರಥಮ ದರ್ಜೆ ಸಹಾಯಕ	ಬೆಳಗ್ಗೆ 11.00 ರಿಂದ 12.30	ಪತ್ರಿಕೆ–1 ಸಾಮಾನ್ಯ ಜ್ಞಾನ, ಗರಿಷ್ಟ ಅಂಕಗಳು–100, ಒ.ಎಂ.ಆರ್. ಆಧರಿತ
		ಮಧ್ಯಾಹ್ನ 02.30 ರಿಂದ 04.30	ಪತ್ರಿಕೆ–2 ಗರಿಷ್ಟ ಅಂಕಗಳು–100, ಒ.ಎಂ.ಆರ್. ಆಧರಿತ • ಸಾಮಾನ್ಯ ಕನ್ನಡ–35 ಅಂಕಗಳು. • ಸಾಮಾನ್ಯ ಇಂಗ್ಲೀಷ್–35 ಅಂಕಗಳು. • ಗಣಕ ವಿಜ್ಞಾನ–30 ಅಂಕಗಳು.

ಪರೀಕ್ಷೆ ನಡೆಯುವ ಸ್ಥಳ: ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

30/3/23
ಕುಲಸಚಿವರು(ಪರೀಕ್ಷಾಂಗ)
ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ – 577007

ವಿಶೇಷ ಸೂಚನೆ: ಅಧ್ಯಾಪಕೇತರ ನೇಮಕಾತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಗಮನಕ್ಕೆ ತರಬಯಸುವುದೇನೆಂದರೆ, ದಿನಾಂಕ: 3 ಏಪ್ರಿಲ್ 2023ರಂದು ನಡೆಯಲಿರುವ ಸಹಾಯಕ ಕುಲಸಚಿವರು/ಕಛೇರಿ ಅಧೀಕ್ಷಕರು ಹಾಗೂ ದಿನಾಂಕ: 9 ಏಪ್ರಿಲ್ 2023 ರಂದು ನಡೆಯಲಿರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಮರು ಅರ್ಹತಾ ಪರೀಕ್ಷೆ ಸಂಬಂಧ ಈಗಾಗಲೇ ಸಂಬಂಧಿಸಿದ ಎಲ್ಲಾ ಅಭ್ಯರ್ಥಿಗಳಿಗೆ ಅಂಚೆ ಮೂಲಕ ಪರೀಕ್ಷಾ ಪ್ರವೇಶ ಪತ್ರವನ್ನು (Hall Ticket) ಕಳುಹಿಸಿಕೊಡಲಾಗಿದೆ. ಆದಾಗ್ಯೂ ಪ್ರವೇಶ ಪತ್ರ ಕಾರಣಾಂತರಗಳಿಂದ ತಲುಪದಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಪರೀಕ್ಷೆ ಪ್ರಾರಂಭವಾಗುವ ಪೂರ್ವದಲ್ಲಿ ಅರ್ಜಿ ಸಲ್ಲಿಕೆ ದಾಖಲಾತಿ ಸಲ್ಲಿಸಿ ಪರೀಕ್ಷಾಂಗ ವಿಭಾಗದಲ್ಲಿ ನಕಲು ಪ್ರವೇಶ ಪತ್ರವನ್ನು ಪಡೆಯಬಹುದಾಗಿರುತ್ತದೆ